ಊರಿನ ವಾತಾವರಣ ತಿಳಿದುಕೊಂಡು ತೀರ್ಮಾನ ತೆಗೆದುಕೊಳ್ಳುವುದು ಉಚಿತ ಎಂದುಕೊಂಡ.

ಅಂತೂ ಇಂತು ಸ್ಲಂ ಒಂದರಲ್ಲಿ ಚಿಕ್ಕ ಗುಡಿಸಲು ಪಡೆಯುವಲ್ಲಿ ಯಶಸ್ವಿಯಾದ. ಆ ಸ್ಲಂನಲ್ಲಿರುವವರೊಟ್ಟಿಗೇ ಹೋಗಿ ಲಾರಿಗೆ ಸಾಮಾನು ತುಂಬುವ ಕೆಲಸದಲ್ಲಿ ತೊಡಗಿಕೊಂಡವನಿಗೆ ಥಟ್ಟನೆ ಒಂದು ದಿನ ಕಂಡದ್ದೆ ಗಾಯನ ಸ್ಪರ್ಧೆಯ ವಿವರ. ಗೋಡೌನೊಂದರ ಗೋಡೆಯ ಮೇಲೆ ದೊಡ್ಡದಾಗಿ ಹಚ್ಚಲ್ಪಟ್ಟ ಫ್ಲೆಕ್ಸ್. ನೋಡುತ್ತಿದ್ದಂತೆಯೆ ಜೈಲಿನ ಸಹಕೈದಿಗಳ ಮಾತು ನೆನಪಾಯಿತು. 'ನಿನ್ನ ಕಂಠ ಅದ್ಭುತವಾಗಿದೆ. ಪಿ.ಬಿ. ಶ್ರೀನಿವಾಸರ ದನಿ ಕೇಳಿದ ಹಾಗೇ ಆಗುತ್ತೆ. ಚಲೋ ಅಭ್ಯಾಸ ಮಾಡಿದರೆ ನೀನು ಒಳ್ಳೆ ಹಾಡುಗಾರ ಆಗಬಹುದು.'

ನೋಡೋಣ ಅಂದುಕೊಂಡವನೆ ಒಂದು ದಿನ ರಜೆ ಮಾಡಿ ಚಾನೆಲ್ ಹುಡುಕಿಕೊಂಡು ಹೋದ. ಮಲ್ಲೇಶ್ವರದ ಮಾರ್ಗೋಸ ಮರಗಳ ನೆರಳಿನ ತಂಪಿನಡಿಯಲ್ಲಿ ಚಾನೆಲಿನ ಹುಡುಕಾಟದಲ್ಲಿ ತೊಡಗಿಕೊಂಡಿರುವಾಗ ಸ್ವರ್ಗದ ಮಾರ್ಗದಲ್ಲಿ ಹೆಜ್ಜೆಯೂರಿದ ಸಂಭ್ರಮವುಂಟಾಗಿತ್ತು. ನಿಜಕ್ಕೂ ಆತ ಸ್ವರ್ಗಕ್ಕೇ ಪ್ರವೇಶ ಪಡೆದಿದ್ದದ್ದು ಗೊತ್ತಾದದ್ದು ಸ್ಪರ್ಧೆಯಲ್ಲಿ ಆತನೇ ಜಯಶಾಲಿಯೆಂದು ನಿರ್ಣಾಯಕರು ಘೋಷಿಸಿದಾಗ.

★★★

ವೇದಿಕೆಯ ಮೇಲೆ ಕೊಟ್ಟ ಚೆಕ್ಕನ್ನ ಆತ ಮರಳಿಸಿದ್ದ. ಬ್ಯಾಂಕು ಅಕೌಂಟು ಎನ್ನುವುದೆಲ್ಲ ತನ್ನ ಪಾಲಿಗೆ ಆಗದ ಕೆಲಸ, ನಗದು ಕೊಡಿ ಎಂದಿದ್ದ. ನಿರ್ವಾಹಕರು ಅವನ ಸಮಸ್ಯೆ ಕೇಳಿ, ಮರುದಿನ ಬನ್ನಿ ಮ್ಯಾನೇಜರೊಂದಿಗೆ ಮಾತಾಡಿ ನೋಡುತ್ತೇನೆ ಎಂದಿದ್ದರು. ಅಂದರೆ, ಇವತ್ತೂ ಕೆಲಸಕ್ಕೆ ಹೋಗುವ ಹಾಗಿಲ್ಲ ಎಂದುಕೊಂಡವನು, ಅಳಿದುಳಿದ ಹಣದಲ್ಲಿಯೆ ದಾರಿ ಬದಿಯ ಗಾಡಿಯಲ್ಲಿ ಚಿತ್ರಾನ್ನ ತಿಂದು ಬಂದು ಮಲಗಿದ. ಅವನಿಗೆ ಅದ್ಭುತ ಸಂತೋಷವಾಗಿತ್ತು. ಹತ್ತುಲಕ್ಷದ ಒಡೆಯ ತಾನು! ಯಾರಿಗೆ ಹೇಳಬೇಕು? ಗಾಯನ ಸ್ಪರ್ಧೆಯಲ್ಲಿ ಪ್ರಥಮ ಬಂದೆ ಅಂದರೆ ಸ್ಲಂನಲ್ಲಿ ಇರುವವರ್‍ಯಾರೂ ಟೀವಿ ನೋಡುವವರಲ್ಲ. ಹೇಳಿದರವರಿಗೆ ಅರ್ಥವಾಗುವುದೂ ಇಲ್ಲ. ಹತ್ತುಲಕ್ಷ ಗೆದ್ದೆ ಅಂದರೆ ಎಲ್ಲಿ ಕಾಸು ತೋರಿಸು, ಸುಳ್ಳೇ ಬೊಗಳೆ ಬಿಡಬೇಡ ಎಂದಾರು. ನಂಬಿಕೆಯಾಗುವಂತೆ ಮಾಡಿದರೆ ತನ್ನನ್ನೇ ಬಡಿದು ಹಾಕಿ ಚೆಕ್ಕು ಕಸಿದುಕೊಂಡು ಹೋದರೆ? ಬೇಡ, ಎಂದು ತನ್ನ ಸಂತೋಷವನ್ನ ತನ್ನೊಳಗೇ ಅದುಮಿದ. ಹೋಳಿಗೆ ಕಣಕದೊಳಗಿನ ಮೆತ್ತನೆಯ ಕಡಲೆ ಬೆಲ್ಲದ ಹೂರಣ ಹೊಟ್ಟೆಯೊಳಗೆ ಪ್ರವಿಸಿದಂತೆ ಖುಷಿಪಟ್ಟ. ಊರಿನ ಬೆಟ್ಟದ ಮೇಲಿನ ನವಿಲು ಬಿಕ್ಕೆ ಹಣ್ಣಿನೊಳಗಣ ಮಿದು ಗುಳವನ್ನ ಚಪ್ಪರಿಸಿ ತಿನ್ನುತ್ತ ಮಿಯಾಂ ಎಂದು ಕೂಗಿದಂತೆ ಕೇಳಿಸಿ ಕಣ್ಣು ತೆರೆದರೆ ಅದಾಗಲೆ ಬೆಳಗಾಗಿತ್ತು.

ಬೆಕ್ಕು ಇಲಿಯೊಂದನ್ನು ಹಿಡಿದು ಹೊಟ್ಟೆತುಂಬ ತಿಂದು ಕಿಟಕಿಯಾಚೆ ಜಿಗಿದೋಡಿತು.

★★★

'ನಿಮ್ಮ ಸಮಸ್ಯೆಯನ್ನ ಮ್ಯಾನೇಜರಿಗೆ ಹೇಳಿದೆ. ನಾವೇನೊ ಟ್ಯಾಕ್ಸ್ ಮುರಿದೇ ಸುಮಾರು ಏಳು ಲಕ್ಷಕ್ಕೆ ನಿಮಗೆ ಅಕೌಂಟ್ ಪೇಯೀ ಕ್ರಾಸ್ ಚೆಕ್ ಕೊಡುತ್ತೇವೆ. ಕ್ಯಾಶ್ ಕೊಡುವ ಹಾಗೇ ಇಲ್ಲ. ನೀವು ನಿಮ್ಮ ಊರಿಗೆ ಹೋಗಿ, ಬ್ಯಾಂಕಿಗೆ ಬೇಕಾದ ದಾಖಲೆ ಪತ್ರ ತಯಾರಿಸಿಕೊಂಡು ಖಾತೆ ಮಾಡಿಕೊಳ್ಳುವುದು ಒಳ್ಳೆಯದು. ಅದು ಸಾಧ್ಯವಾಗುವುದಿಲ್ಲ ಎಂದಾದರೆ ಒಂದು ಕೆಲಸ ಮಾಡಬಹುದು ಅಂತಾರೆ ಮ್ಯಾನೇಜರು. ನಾವು ಹೆಚ್ಚೆಂದರೆ ಅಕೌಂಟ್ ಪೇಯಿ ತೆಗೆದು ಬರಿದೆ ಕ್ರಾಸ್ ಹಾಕಬಹುದೇನೋ, ಹಾಗೆ ಮಾಡಿದ ಬಳಿಕ ಅದನ್ನ ಪಡೆದುಕೊಳ್ಳುವವರು ತಮ್ಮ ಖಾತೆಗೆ ಹಾಕಿಕೊಂಡು, ತಮ್ಮ ಕಮೀಶನ್ ಇಟ್ಟುಕೊಂಡು, ಹೆಚ್ಚೆಂದರೆ ನಿಮಗೆ ನಾಲ್ಕೈದು ಲಕ್ಷ ಬರಬಹುದು...'

ಚಾನೆಲ್ಲಿನಲ್ಲಿ ಅವನಿಗೆ ಸಿಕ್ಕ ಉತ್ತರ! ಅವರಿಗೆ ಯೋಚಿಸುತ್ತೇನೆ ಎಂದಷ್ಟೆ ಹೇಳಿ ಬಂದುಬಿಟ್ಟ.